# ಹೊಸತು

## ವೈಲ್ಡ್‌ಕ್ರಾಫ್ಟ್ ಬ್ಯಾಗ್



ಬ್ಯಾಗ್ ತಯಾರಿಕೆಯಲ್ಲಿ ಹೆಸರಾದ ವೈಲ್ಡ್‌ಕ್ರಾಫ್ ಕಂಪೆನಿ ಇದೀಗ ಹೊಸ ಬಗೆಯ ಟ್ರಾವೆಲ್ ಬ್ಯಾಗ್, ಒಂದು ದಿನದ ಪ್ರಯಾಣಕ್ಕಾಗಿ ಸೂಕ್ತವಾಗಿರುವ ಬ್ಯಾಗ್‌ಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. 'ಹೈಪಾಡ್ಯುರ' ಸಂಗ್ರಹ ಹೆಸರಿನಲ್ಲಿ ಹೊರತಂದ ಈ ಬ್ಯಾಗ್ ನೈಲಾನ್ ಉತ್ಪನ್ನದಿಂದ ಕೂಡಿದ್ದು ದೀರ್ಘ ಬಾಳಿಕೆ ಬರುತ್ತದೆ ಎನ್ನುತ್ತದೆ ಕಂಪೆನಿ. ಬೆಲೆ 8,995 ರೂಪಾಯಿ.




## ತೋಶಿಬಾ ಅಲ್ಟ್ರಾ ಪೋರ್ಟಬಲ್ ಬುಕ್

ತೋಶಿಬಾ ಇಂಡಿಯಾ ಕಂಪೆನಿ ನೂತನ ರಿವರ್ಸಿಬಲ್ ಡಾಕ್ ಡಿಟ್ಯಾಚಬಲ್ ಅಲ್ಟ್ರಾ ಪೋರ್ಟಬಲ್ ಬುಕ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಬ್ಯುಸಿನೆಸ್ ಬಳಕೆದಾರರ ಅವಶ್ಯಕತೆಗಳಿಗೆ ಅನುಸಾರವಾಗಿ ಅಭಿವೃದ್ಧಿ ಪಡಿಸಲಾಗಿರುವ ಇದು ಹೆಚ್ಚಿನ ಸಾಮರ್ಥ್ಯದ ಇಂಟೆಲ್ ಕೋರ್ ಪ್ರೊಸೆಸರ್ ಹೊಂದಿದ್ದು, ವಿಷಯ ಸೃಷ್ಟಿ ಮತ್ತು ಬಳಕೆಯನ್ನು ಇನ್ನಷ್ಟು ಸುಲಲಿತಗೊಳಿಸಲಿದೆ. ಹಗುರ, ನಯ, ತೆಳುವಾದ ವಿನ್ಯಾಸವನ್ನು ಹೊಂದಿದ್ದು, 16 ಗಂಟೆಗಳಷ್ಟು ದೀರ್ಘ ಬ್ಯಾಟರಿ ಲೈಫ್ ನೀಡುತ್ತದಡೆ. ವೃತ್ತಿನಿರತರ–ಆಫೀಸಿನ ಒಳಗೆ ಹಾಗೂ ಹೊರಗಿನ–ಅವಶ್ಯಕತೆಗಳಿಗೆ ಹೇಳಿ ಮಾಡಿಸಿದಂತಿದೆ. ಬೆಲೆ 1,30,000 ರೂಪಾಯಿ.

ಮಾಹಿತಿಗೆ: 9886195494




## ಕೋಕಕೋಲ ಫ್ಯೂಜ್ ಟೀ

ತಂಪು ಪಾನೀಯಗಳ ಪೈಕಿ ಮುಂಚೂಣಿಯಲ್ಲಿರುವ ಕೋಕಕೋಲ ಕಂಪೆನಿ ಹೊಸ ಫ್ಯೂಜ್ ಟೀ ಒಂದನ್ನು ಪರಿಚಯಿಸಿದೆ. ಈ ಪಾನೀಯದಲ್ಲಿ ಹಣ್ಣಿನ ರಸದ ಸ್ವಾದವಿದೆ. ಇತರ ನೈಸರ್ಗಿಕ ಅಂಶಗಳನ್ನು ಬ್ಲೆಂಡ್ ಮಾಡಿದ್ದು ಟೀ ಸ್ವಾದಿಷ್ಟವಾಗಿದೆ. ಲೆಮನ್ ಮತ್ತು ಪೀಚ್ ಫ್ಲೇವರ್‌ಗಳಲ್ಲಿ ಸಿಗುತ್ತದೆ. ಪೇಯದ ರುಚಿ ವಿಶಿಷ್ಟವಾಗಿದ್ದು, ಗ್ರಾಹಕರಿಗೆ ಇಷ್ಟವಾಗಬಹುದು ಎಂಬುದು ಕಂಪೆನಿ ಲೆಕ್ಕಾಚಾರ. 250 ಎಂಎಲ್ ಬಾಟಲಿಗೆ 30 ರೂಪಾಯಿ.

## ಕರಾಟ್‌ಲೇನ್ ಜ್ಯುವೆಲ್ಲರಿ



ವಿನೂತನ ವಿನ್ಯಾಸಗಳ ಆಭರಣಗಳಿಗೆ ಹೆಸರಾದ ಕರಾಟ್‌ಲೇನ್ ಜ್ಯುವೆಲ್ಲರಿ ಇದೀಗ ಫ್ಯಾಷನೆಬಲ್ ಒಡವೆಗಳನ್ನು 'ಟ್ರೆಲ್ಲಿಸ್' ಹೆಸರಿನಲ್ಲಿ ಬಿಡುಗಡೆ ಮಾಡಿದೆ. ಹಗುರವಾದ ಮತ್ತು ರೇಡಿಯಂಟ್ ಡಿಸೈನ್‌ಗಳನ್ನು ಹೊಂದಿರುವ ಒಡವೆಗಳು ಪ್ರೀತಿಪಾತ್ರರಿಗೆ ಉಡುಗೊರೆಯಾಗಿ ನೀಡಲು ಸೂಕ್ತವಾಗಿದೆ. ಬೆಲೆ 8,988ರಿಂದ 91,800 ರೂ.ವರೆಗೆ.

ಮಾಹಿತಿಗೆ: 9820224440

## ಫಿಲಿಪ್ಸ್ ಹ್ಯು ಎಲ್‌ಇಡಿ ಲೈಟ್

ಫಿಲಿಪ್ಸ್ ಕಂಪೆನಿ ಇದೀಗ ಹೊಸ ಬಗೆಯ ಎಲ್‌ಇಡಿ ಲೈಟ್ ಅನ್ನು 'ಹ್ಯು' ಹೆಸರಿನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರಲ್ಲಿರುವ ಪರ್ಸನಲ್ ವೈರ್‌ಲೆಸ್ ಲೈಟಿಂಗ್ ಸಿಸ್ಟಂ–ಫಿಲಿಪ್ಸ್ ಹ್ಯು ಬಳಕೆದಾರರಿಗೆ ಮನೆಯ ಲೈಟಿಂಗ್ ಅನ್ನು ಅವರ ಸ್ಮಾರ್ಟ್‌ಫೋನ್ ಅಥವಾ ಟ್ಯಾಬ್ಲೆಟ್ ಮೂಲಕ ನಿಯಂತ್ರಿಸುವ ಅವಕಾಶ ನೀಡುತ್ತದೆ. ಇದು ಐಓಎಸ್ ಮತ್ತು ಆಂಡ್ರಾಯಿಡ್ ಮೊಬೈಲ್ ಪ್ಲ್ಯಾಟ್‌ಫಾರಂಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಈ ಸ್ಮಾರ್ಟ್ ಕಿಟ್‌ನಲ್ಲಿ ಮೂರು ಬಗೆಯ ಉತ್ಪನ್ನಗಳಿವೆ.

ಬೆಲೆ 16,995 ರೂಪಾಯಿ. ವಿವರಗಳಿಗೆ: 9582949329 | 9871226459

